ಭೂ ಒತ್ತುವರಿಯ ತೆರವು

185(575); ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)

ಅ) ರಾಜ್ಯದಲ್ಲಿ ಒತ್ತುವರಿಯಾಗಿದೆ ಎನ್ನಲಾದ ಒಟ್ಟು ಭೂ ಪ್ರದೇಶದ ಪ್ರಮಾಣವನ್ನು ಸರ್ಕಾರ ಗುರುತಿಸಿದೆಯೇ; ಭೂ ಒತ್ತುವರಿಯ ತೆರವಿಗಾಗಿ: ಸರ್ಕಾರದ ಮುಂದಿರುವ ಪ್ರಸ್ತಾವನೆಗಳ ವಿವರಗಳೇನು ;

ಆ) ರಾಜ್ಯದಾದ್ಯಂತ ಭೂಸರ್ವೆ ಮಾಡುವ ಕ್ರಿಯಾ ಯೋಜನೆಗಳ ವಿವರಗಳೇನು ;

ಇ) ಭೂಸರ್ವೆ ಕಾರ್ಯಕ್ರಮದಲ್ಲಿ ಒಳಗೊಳ್ಳುವ ಪ್ರಯೋಜನಕಾರಿ ಅಂಶಗಳೇನು: ರಾಷ್ಟ್ರೀಯ ಕಾರ್ಯಕ್ರಮದನ್ವಯ ಜಾರಿಗೆ ತರುವ ಈ ಕಾರ್ಯಕ್ರಮವೂ ಒಳಗೊಂಡಂತೆ ರಾಜ್ಯದ ಎಲ್ಲಾ ಭೂಮಿಯನ್ನು ಪುನರ್ ಸರ್ವೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ವಿ.ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಹೌದು.

ರಾಜ್ಯದಾದ್ಯಂತ ಒಟ್ಟು 13,02,241–00 ಎಕರೆ ಜಮೀನು ಒತ್ತುವರಿ ಎಂದು ಗುರುತಿಸಲಾಗಿದ್ದು, ಈಗಾಗಲೇ 1,00,555–00 ಎಕರೆ ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ಉಳಿದ 7,46,985,00 ಎಕರೆ ಜಮೀನು ನಮೂನೆ 50–51 ರ ಅರ್ಜಿಯನ್ನೊಳಗೊಂಡಿದ್ದು, ಅಕ್ರಮ ಸಕ್ರಮ ಸಮಿತಿಯು ಈ ಬಗ್ಗೆ ನಿರ್ಣಯ ಕೈಗೊಳ್ಳಬೇಕಾಗಿದೆ. ಇನ್ನುಳಿದಂತೆ 454,704–00 ಎಕರೆ ಜಮೀನನ್ನು ಖುಲ್ಲಾ ಪಡಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಾಲಬದ್ಧ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಸೂಚನೆಗಳನ್ನು ನೀಡಲಾಗಿದೆ. ಇದರನ್ವಯ ರಾಜ್ಯಾದ್ಯಂತ ಎಲ್ಲಾ ಜಿಲ್ಲಾಧಿಕಾರಿಗಳು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುತ್ತಿದ್ದು ಅದರಂತೆ ಒತ್ತುವರಿ ತೆರವುಗೊಳಿಸಲು ಕ್ರಮ ವಹಿಸಲಾಗುವುದು.

ಆ) 1. ರಾಷ್ಟ್ರೀಯ ಭೂದಾಖಲೆಗಳ ಆಧುನೀಕರಣ ಯೋಜನೆಯಡಿಯಲ್ಲಿ ರಾಜ್ಯದ 05 ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ತುಮಕೂರು, ರಾಮನಗರ, ಚಿಕ್ಕಬಳ್ಳಾಪುರ ಹಾಗೂ ಬೆಳಗಾಂನಲ್ಲಿ ಮರುಭೂಮಾಪನ ಕಾರ್ಯ ಕೈಗೆತ್ತಿಕೊಳ್ಳಲು ಕ್ರಿಯಾ ಯೋಜನೆಗೆ ಕೇಂದ್ರ ಸರ್ಕಾರದಿಂದ ಈಗಾಗಲೇ ಮಂಜೂರಾತಿ ದೊರಕಿರುತ್ತದೆ. ಮರುಭೂಮಾಪನ ಹಾಗೂ ಅನುದಾನ ಸಹ: ಬಿಡುಗಡೆಗೊಂಡಿರುತ್ತದೆ. ಎಲ್ಲಾ ಜಿಲ್ಲೆ ಗಳಲ್ಲಿ ಪ್ರಾಯೋಗಿಕವಾಗಿ ಒಟ್ಟು 58 ಗ್ರಾಮಗಳಲ್ಲಿ ಪ್ರಾಯೋಗಿಕವಾಗಿ ಕಾರ್ಯ ಕೈಗೆತ್ತಿಕೊಳ್ಳಲು ಕ್ರಮ ಕೈಗೊಂಡಿದ್ದು, 27 ಗ್ರಾಮಗಳಲ್ಲಿ ಈಗಾಗಲೇ ಮರುಭೂಮಾಪನ ಕಾರ್ಯ ಪ್ರಾರಂಭಗೊಂಡು ಮುಕ್ತಾಯದ ಹಂತದಲ್ಲಿರುತ್ತದೆ,

2, ರಾಷ್ಟ್ರೀಯ ಭೂದಾಖಲೆಗಳ ಆಧುನೀಕರಣ ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಉಳಿದ 25 ಜಿಲ್ಲೆಗಳಲ್ಲಿ ಮರುಭೂಮಾಪನ ಕಾರ್ಯವನ್ನು ಕೈಗೆತ್ತಿಕೊಳ್ಳಲು ಕ್ರಿಯಾಯೋಜನೆಯ ಪ್ರಸ್ತಾವನೆಯನ್ನು ಈಗಾಗಲೇ ತಯಾರಿಸಲಾಗಿದ್ದು, ಕೇಂದ್ರ ಸರ್ಕಾರದ ಮಂಜೂರಾತಿಗಾಗಿ ಸಲ್ಲಿಸುವ ಹಂತದಲ್ಲಿರುತ್ತದೆ.

ಇ) ಮರುಭೂಮಾಪನ ಕಾರ್ಯ ಕೈಗೆತ್ತಿಕೊಂಡಲ್ಲಿ ಈ ಕೆಳಕಂಡ ಪ್ರಯೋಜನ ಗಳಿರುತ್ತವೆ.

1. ಪ್ರಸ್ತುತ ಭೂದಾಖಲೆಗಳು ಹಲವು ದಶಕಗಳ ಹಿಂದೆ ಸಿದ್ಧಗೊಂಡಿದ್ದು. ಪ್ರಸ್ತುತ ಜಮೀನಿನ ನೈಜ ಚಿತ್ರವನ್ನು ಬಿಂಬಿಸುತ್ತಿಲ್ಲ. ಪ್ರತಿ ಗ್ರಾಮದಲ್ಲಿ ಉಂಟಾಗಿರುವ ಬೆಳವಣಿಗೆಗಳು ರಸ್ತೆ, ನಾಲಾ, ಕೆರೆ, ವಸತಿ ಪ್ರದೇಶಗಳು ಭೂದಾಖಲೆಗಳಲ್ಲಿ ಇಂಡೀಕರಣವಾಗಿರುವುದಿಲ್ಲ. ಮರು ಭೂಮಾಪನ ಕೈಗೊಂಡ ಹೊಸ ದಾಖಲೆಗಳು ಸಿದ್ಧಗೊಂಡರೆ ಜಮೀನಿನ ನೈಜಚಿತ್ರಣ ಲಭ್ಯವಾಗುತ್ತದಲ್ಲದೆ, ಹೊಸದಾಗಿ ಕೈಗೊಳ್ಳಬೇಕಾದ ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಅಮೂಲ್ಯ

ಮಾಹಿತಿ ನೀಡುತ್ತದೆ. ಗ್ರಾಮಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ಕೆ ಅತ್ಯಂತ ಅವಶ್ಯಕವಾಗಿರುತ್ತದೆ,

2. ಪ್ರತಿಯೊಂದು... ಜಮೀನಿನ ಬಳಕೆ/ ಉಪಯೋಗದ ಮಾಹಿತಿ ಯೋಜನಾ ಕಾರ್ಯ ಸಿದ್ಧಪಡಿಸಲು ಸಹಾಯಕವಾಗಿರುತ್ತದೆ.

3. ಅಮೂಲ್ಯವಾದ ಸಾರ್ವಜನಿಕ ಆಸ್ತಿಗಳು ರಸ್ತೆ, ಕೆರೆ, ಕುಂಟಿ, ದಾರಿ, ಇತರೆ ಗೋಮಾಳ ಇತ್ಯಾದಿ ಸರ್ಕಾರಿ ಜಮೀನುಗಳು ಸಾರ್ವಜನಿಕರಿಗೆ ಅಗತ್ಯವಾದ ಸರ್ಕಾರಿ ಜಮೀನಿನ ಲಭ್ಯತೆ ಅತಿಕ್ರಮಣಗಳ ಗುರುತಿಸುವಿಕೆ ಮರುಭೂಮಾಪನದಿಂದ ಸಾಧ್ಯವಾಗಿರುತ್ತದೆ.

4. ಬಾಕಿ ಉಳಿದಿರುವ ದುರ್ಬಲ ವರ್ಗ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಜನಾಂಗಗಳಿಗೆ ಮಂಜೂರಾಗಿರುವ ಹಾಗೂ ಭೂರಹಿತರಿಗೆ ಮಂಜೂರಾಗಿರುವ ಪೋಡಿಕಾರ್ಯ ಮರುಭೂಮಾಪನಗಳಿಂದ ಪೂರ್ಣಗೊಂಡು ಪ್ರತಿಯೊಬ್ಬರಿಗೆ ಹಕ್ಕು ದಾಖಲೆ ಲಭ್ಯವಾಗುತ್ತದೆ.

5. ರಾಜ್ಯದ ಅಮೂಲ್ಯವಾದ ಅರಣ್ಯ ಪ್ರದೇಶಗಳ ಗಡಿ ಗುರುತಿಸುವಿಕೆ, ಮರುಭೂಮಾಪನದಿಂದ ಸಾಧ್ಯವಾಗುತ್ತಿದ್ದು, ಅರಣ್ಯ ಪ್ರದೇಶಗಳ ಒತ್ತುವರಿ, ಮತ್ತು ತೆರವುಗೊಳಿಸುವುದಕ್ಕೆ ಅಗತ್ಯ ಮಾಹಿತಿ ಸಿಗುತ್ತದೆ.

6. ಬಾಕಿ ಇರುವ ಲಕ್ಷಾಂತರ ಪೋಡಿ ಪ್ರಕರಣಗಳ ಅಳತೆಕಾರ್ಯ ಪೂರ್ಣಗೊಂಡು ಪ್ರತಿಯೊಬ್ಬ ಖಾತೆದಾರರಿಗೂ ಅವರ ಹಕ್ಕಿಗೆ ಅನುಗುಣವಾದ ಭೂದಾಖಲೆ ಸಿದ್ದವಾಗುತ್ತದೆ.

7. ಗ್ರಾಮೀಣ ಪ್ರದೇಶದ–ಬಹುಪಾಲು ಭೂವ್ಯಾಜ್ಯಗಳು/ಸಿವಿಲ್ ನ್ಯಾಯಾಲಯಗಳಲ್ಲಿರುವ ಕೋರ್ಟ್ ಪ್ರಕರಣಗಳ ಇತ್ಯರ್ಥಕ್ಕೆ ಸಹಾಯಕವಾಗುತ್ತದೆ.

8. ಮರುಭೂಮಾಪನದಿಂದ ಡಿಜಿಟಲ್ ಮಾಹಿತಿ ಸಿದ್ಧಗೊಳ್ಳುವುದರಿಂದ ದಾಖಲೆಗಳ ತಿದ್ದುವಿಕೆ, ದುರುಪಯೋಗವನ್ನು ತಪ್ಪಿಸಲು

ಸಾಧ್ಯವಾಗುತ್ತದೆ, ಪರಿಣಾಮಕಾರಿಯಾಗಿ ಭೂದಾಖಲೆಗಳು ಎಲ್ಲಾ ಭೂದಾಖಲೆಗಳ ಬಳಕೆಯಲ್ಲಿ ಉಪಯೋಗವಾಗುತ್ತದೆ.

ದೇವಾಲಯಗಳ ಅಭಿವೃದ್ಧಿ ಮತ್ತು ನವೀಕರಣ

184 (57); ಶ್ರೀ ಬಾಲಕೃಷ್ಣ ಸಿ.ಎನ್

ಅ) ರಾಜ್ಯದಲ್ಲಿ ಮುಜರಾಯಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ವಿವಿಧ ದರ್ಜೆಯ ದೇವಾಲಯಗಳ ಜಿಲ್ಲಾವಾರು ಸಂಖ್ಯಾವಾರು ಪೂರ್ಣ ವಿವರ ನೀಡುವುದು;

ಆ) ಕಳೆದ ಮೂರು ವರ್ಷಗಳಲ್ಲಿ ಮುಜರಾಯಿ ವ್ಯಾಪ್ತಿಗೆ ಒಳಪಡದ ದೇವಾಲಯಗಳ ಅಭಿವೃದ್ಧಿಗೆ ಇಲಾಖೆಯು ಮಂಜೂರು ಮಾಡಿದ ಆರ್ಥಿಕ ನೆರವಿನ ಜಿಲ್ಲಾವಾರು. ಪೂರ್ಣ ವಿವರ ನೀಡುವುದು ;

ಇ) ಹಳೆಯ ಪಾರಂಪರಿಕ ಮತ್ತು ಐತಿಹಾಸಿಕ ದೇವಾಲಯಗಳನ್ನು ಗುರುತಿಸಿ ಅವುಗಳ ನವೀಕರಣಗೊಳಿಸಲು ಸರ್ಕಾರದ ಕ್ರಮಗಳೇನು;

ಈ) ಮುಜರಾಯಿ ಪಟ್ಟಿಯಲ್ಲಿಲ್ಲದ ದೇವಾಲಯಗಳ ಸ್ಥಿರಾಸ್ತಿಗಳನ್ನು ಸಂರಕ್ಷಿಸುವ ಕುರಿತು ಸರ್ಕಾರದ ಕೈಗೊಂಡ ಕ್ರಮಗಳೇನು?

ಶ್ರೀ ಪ್ರಕಾಶ ಬಾಬಣ್ಣ ಹುಕ್ಕೇರಿ (ಸಣ್ಣ ಕೈಗಾರಿಕೆ, ಸಕ್ಕರೆ ಮತ್ತು ಮುಜರಾಯಿ ಸಚಿವರು)

ಅ) ರಾಜ್ಯದಲ್ಲಿರುವ ಒಟ್ಟು ಮುಜರಾಯಿ ದೇವಾಲಯಗಳ ಸಂಖ್ಯೆ 34.453, ಸದರಿ ದೇವಾಲಯಗಳ ಜಿಲ್ಲಾವಾರು ವಿವರಗಳ ಪಟ್ಟಿ (ಪುಸ್ತಕ)ಯನ್ನು ಸನ್ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಸಲ್ಲಿಸಲಾಗುವುದು.

ಆ) ಮುಜರಾಯಿ, ಮುಜರಾಯೇತರ ಮತ್ತು ಮಠಗಳಿಗೆ ಪ್ರತ್ಯೇಕವಾಗಿ ಅನುದಾನ ಮಂಜೂರು ಮಾಡದೇ ಕ್ರೋಢೀಕರಿಸಿ ಮಂಜೂರು ಮಾಡಲಾಗಿದೆ.